KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು PAPER CLIPPINGS
DEPARTMENT / SUBJECT:
NAME OF THE NEWS PAPER: ಪ್ರಜಾವಾಣಿ
DATE 5/2/20

# ನಿಂಬಾಳ್ಕರ್, ಹಿಲೋರಿ ವಿರುದ್ಧ ಎಫ್ಐಆ

## 'ಐಎಂಎ' ಬಹುಕೋಟಿ ವಂಚನೆ ಪ್ರಕರಣ ● ಡಿವೈಎಸ್‌ಪಿ, ಇನ್‌ಸ್ಪೆಕ್ಟರ್, ಎಸ್ಐ ಅವರೂ ಆರೋ

ಪ್ರಜಾವಾಣಿ ವಾರ್ತೆ 5-2-20

ಬೆಂಗಳೂರು: ಐಎಂಎ (ಐ-ಮಾನಿಟರಿ ಅಡ್ವೈಸರಿ) ಕಂಪನಿಯ ಬಹುಕೋಟಿ ವಂಚನೆ ಪ್ರಕರಣದಲ್ಲಿ ಅಪರಾಧಿಕ ಒಳ ಸಂಚು ರೂಪಿಸಿ ಭ್ರಷ್ಟಾಚಾರ ಎಸಗಿದ ಆರೋಪದಡಿ ಐಪಿಎಸ್ ಅಧಿಕಾರಿಗಳಾದ ಹೇಮಂತ್ ನಿಂಬಾಳ್ಕರ್ ಮತ್ತು ಅಜಯ್ ಹಿಲೋರಿ ವಿರುದ್ಧ ಸಿಬಿಐ ಅಧಿಕಾರಿಗಳು ಎಫ್ಐಆರ್ ದಾಖಲಿಸಿದ್ದಾರೆ.

ಕಮರ್ಷಿಯಲ್ ಸ್ಟ್ರೀಟ್ ಠಾಣೆ ಇನ್‌ಸ್ಪೆಕ್ಟರ್ ಆಗಿದ್ದ ಎಂ. ರಮೇಶ್, ಸಬ್ ಇನ್‌ಸ್ಪೆಕ್ಟರ್ ಗೌರಿಶಂಕರ್, ಸಿಐಡಿಯ ಡಿವೈಎಸ್ಪಿ ಇ.ಬಿ.ಶ್ರೀಧರ್, ಐಎಂಎ ಮಾಲೀಕ ಮೊಹ್ಮದ್ ಮನ್ಸೂರ್ ಖಾನ್, ವ್ಯವಸ್ಥಾಪಕ ನಿರ್ದೇಶಕ ನಿಜಾಮುದ್ದೀನ್, ನಿರ್ದೇಶಕರಾದ ವಸೀಂ, ಅರ್ಷದ್ ಖಾನ್ ಸೇರಿ 10 ಮಂದಿಯನ್ನು ಆರೋಪಿಗಳನ್ನಾಗಿ ಮಾಡಲಾಗಿದೆ.

ಸಿಐಡಿ ಐಜಿಪಿ ಆಗಿದ್ದ ನಿಂಬಾಳ್ಕರ್ ಮತ್ತು ಬೆಂಗಳೂರು ಪೂರ್ವ ವಿಭಾಗದ ಡಿಸಿಪಿ ಆಗಿದ್ದ ಹಿಲೋರಿ ಸೇರಿದಂತೆ ಉಳಿದೆಲ್ಲ ಆರೋಪಿಗಳು ಪ್ರಕರಣದಲ್ಲಿ ಭಾಗಿಯಾಗಿದ್ದ ಬಗ್ಗೆ ಸಿಬಿಐ ಅಧಿಕಾರಿಗಳು ಪುರಾವೆ ಸಂಗ್ರಹಿಸಿದ್ದರು. ಅಧಿಕಾರಿಗಳ ವಿರುದ್ಧ ವಿಚಾರಣೆಗೆ ಅನುಮತಿ ಕೋರಿ ರಾಜ್ಯ ಸರ್ಕಾರಕ್ಕೂ ಪತ್ರ ಬರೆದಿದ್ದರು.

ರಾಜ್ಯ ಸರ್ಕಾರ ಅನುಮತಿ ನೀಡಿದ್ದರ ಬೆನ್ನಲ್ಲೇ ಆರೋಪಿಗಳ ವಿರುದ್ಧ ಎಫ್ಐಆರ್ ದಾಖಲಾಗಿದೆ.

'ಹೆಚ್ಚಿನ ಲಾಭಾಂಶದ ಆಮಿಷವೊಡ್ಡಿ ಅಕ್ರಮವಾಗಿ ಹಣ ಹೂಡಿಕೆ ಮಾಡಿಸಿಕೊಳ್ಳುತ್ತಿರುವ ಐಎಂಎ ಕಂಪನಿ ಮೇಲೆ ನಿಗಾ ವಹಿಸುವಂತೆ 2016 ಆ. 12ರಂದು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ (ಡಿಜಿ-ಐಜಿಪಿ) ಆರ್‌ಬಿಐ ಸೂಚಿಸಿತ್ತು. ಡಿಜಿ-ಐಜಿಪಿ ನಿರ್ದೇಶನ ನೀಡಿದರೂ ಬೆಂಗಳೂರು ಪೂರ್ವ ವಿಭಾಗದ ಡಿಸಿಪಿ ಆಗಿದ್ದ ಹಿಲೋರಿ ಹಾಗೂ ಇನ್‌ಸ್ಪೆಕ್ಟರ್ ರಮೇಶ್ ಸಮರ್ಪಕ ವಿಚಾರಣೆ ನಡೆಸದೆ ಪ್ರಕರಣ ಮುಕ್ತಾಯಗೊಳಿಸಿದ್ದರು.

'ನಿಯಮ ಪ್ರಕಾರವೇ ಕಂಪನಿ ವ್ಯವಹರಿಸುತ್ತಿದೆ. ಯಾವುದೇ ಹೂಡಿಕೆದಾರರು ದೂರು ನೀಡದಿರುವುದರಿಂದ 'ಕರ್ನಾಟಕ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ'ಯಡಿ (ಕೆಪಿಐಡಿ) ಕ್ರಮ ಜರುಗಿಸಲು ಸಾಧ್ಯವಿಲ್ಲ' ಎಂದು ಆರೋಪಿಗಳು ವರದಿಯಲ್ಲಿ ಉಲ್ಲೇಖಿಸಿದ್ದರೆಂದು ಎಫ್ಐಆರ್‌ನಲ್ಲಿ ಸಿಬಿಐ ಅಧಿಕಾರಿಗಳು ನಮೂದಿಸಿದ್ದಾರೆ.

ವರದಿಯನ್ನು
ಆರ್‌ಬಿಐ, ಮರು ಪರಿಶೀ
ಡಿಸಿಪಿಗೆ ಮತ್ತೆ ಸೂಚಿಸಿತ್ತು.
ಗಂಭೀರವಾಗಿ ಪರಿಗಣಿಸದ
ತಾನು ವರ್ಗಾವಣೆಯಾಗು
'ಸಿಐಡಿ ಅಧಿಕಾರಿಗಳು ತನಿ
ತ್ತಿದ್ದಾರೆ' ಎಂಬ ಹೇಳಿಕೆ ನೀ
ಮುಚ್ಚಿಹಾಕಿದ್ದರು.

ಈ ಮಧ್ಯೆ, ಐಎಂಎ ಕಂ
ದೂರುಗಳು ಬಂದಿದ್ದರಿಂದ
ತನಿಖೆಗೆ ಕಂದಾಯ
ಪ್ರಧಾನ ಕಾರ್ಯದರ್ಶಿ ಸೂ

ರಮೇಶ್, ಗೌರಿಶಂಕ
ಹಿಲೋರಿ ಯಾವುದೇ
ದುಕೊಂಡಿರಲಿಲ್ಲ.
ದುರ್ಬಳಕೆ ಮಾಡಿಕೊಂಡು
ಅಧಿಕಾರಿಗಳು ಒಳಸಂಚು
ಐಎಂಎಗೆ ಲಾಭ ಮಾಡಿಕೊ
ದಾಗಿ ಸಿಬಿಐ ಹೇಳಿದೆ.

ಈ ವಂಚನೆ ಪ್ರಕರಣ
ಕಂಪನಿಯ ನಿರ್ದೇಶಕರು,
ಶೋಧಕರು, ಮಧ್ಯವರ್ತಿ
22 ಮಂದಿ ವಿರುದ್ಧ ಸಿಬಿಐ
ಎರಡು ದೋಷಾರೋಪ ಪಟ್ಟಿ


ಹೇಮಂತ್ ನಿಂಬಾಳ್ಕರ್


ಅಜಯ್ ಹಿಲೋರಿ


ಎಂ.ರಮೇಶ್


ಗೌರಿ ಶಂಕರ್

### 'ಐಎಂಎಗೆ ಅನುಕೂಲಕರ ವರದಿ'


ಮನ್ಸೂರ್ ಖಾನ್

ಐಎಂಎ ಕಂಪನಿಯ ವ್ಯವಹಾರಗಳನ್ನು ಕೆಪಿಐಡಿ ಕಾಯ್ದೆಯಡಿ ತನಿಖೆ ನಡೆಸುವಂತೆ 2018ರ ಜುಲೈ 4ರಂದು ಸಿಐಡಿ (ಆರ್ಥಿಕ ಅಪರಾಧಗಳ ವಿಭಾಗ) ಐಜಿಪಿಗೆ ಪೊಲೀಸ್ ಮಹಾ ನಿರ್ದೇಶಕರು ನಿರ್ದೇಶಿಸಿದ್ದರು.

ಡಿವೈಎಸ್ಪಿ ಇ.ಬಿ. ಶ್ರೀಧರ್ ಅವರನ್ನು ತನಿಖಾಧಿಕಾರಿಯಾಗಿ ನೇಮಿಸಲಾಗಿತ್ತು. ಅವರು 2019ರ ಜ. 1ರಂದು ಕ್ಲೀನ್ ಚಿಟ್ ನೀಡಿದ್ದರು.

ಅದರ ಆಧಾರದಲ್ಲಿ, 2019ರ ಜ. 18ರಂದು ವರದಿ ನೀಡಿದ್ದ ಹೇಮಂತ್ ನಿಂಬಾಳ್ಕರ್, ಐಎಂಎಗೆ ಅನುಕೂಲಕರವಾದ ವರದಿ ನೀಡಿದ್ದರು. ಈ ವರದಿಗಳಿಗೆ ಪ್ರತಿಯಾಗಿ ಲಂಚ ಪಡೆಯಲಾಗಿದೆ ಎಂಬ ಆರೋಪ ಅಧಿಕಾರಿಗಳ ಮೇಲಿದೆ.

ಬಲ್ ಸಾನ್ಸ

ರಾಷ್ಟ್ರೀಯ ನೇಮಕಾತಿ ಸಂಸ್ಥೆ ರಚನೆ- ಕೇಂದ್ರ ಬಜೆಟ್‌ನಲ್ಲಿ ಪ್ರಸ್ತಾವ